**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**
**ಸಿ.ಸಿ.2287/2024**

| | | |
|---|---|---|
| ಸಾಕ್ಷಿದಾರರ ಹೆಸರು | : ಸುರೇಶ್ ಕಲ್ಯಾಡ್ರಾ | ಫ್ರಾಸಾ-1 |
| ತಂದೆಯ ಹೆಸರು | : ಮಲ್ಲಪ್ಪ | ಚಾಸಾ-2 |
| ವಯಸ್ಸು | : 29 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಅಬಕಾರಿ ಪೇದೆ | ದಿನಾಂಕಃ 17.11.2025. |
| ವಾಸಸ್ಥಳ | : ಮೂಡಿಗೆರೆ ವಲಯ. | |

**:ಮುಖ್ಯ ವಿಚಾರಣೆಃ ಪ್ರಾಭ್ಯಾ.ಸ.ಸ.ಅ. ರವರಿಂದ:**

ನಾನು ದಿ.04.10.2019 ರಿಂದ ಮೂಡಿಗೆರೆ ಅಬಕಾರಿ ನಿರೀಕ್ಷಕರ ಕಚೇರಿಯಲ್ಲಿ ಅಬಕಾರಿ ಪೇದೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿ.18.03.2024 ರಂದು ಸ.7.00 ಸಮಯಕ್ಕೆ ನಾನು ಚಾಸಾ-1 ಮತ್ತು 9 ರವರೊಂದಿಗೆ ಜನ್ನಾಪುರ ಗ್ರಾಮದಲ್ಲಿ ಗಸ್ತು ಮಾಡುತ್ತಿದ್ದಾಗ ಜನ್ನಾಪುರ-ಸಕಲೇಶಪುರ ರಸ್ತೆಯಲ್ಲಿ ಒಬ್ಬ ವ್ಯಕ್ತಿಯು KA-46-J-6066 ಸ್ಲೆಂಡರ್ ಬೈಕ್ ನಲ್ಲಿ ಆರೋಪಿಕ್ರಮವಾಗಿ ಮದ್ಯ ಸಾಗಾಣಿಕೆ ಮಾಡುತ್ತಿದ್ದಾರೆ ಎಂದು ಮಾಹಿತಿ ಬಂದಿದ್ದು ಅದರಂತೆ ನಾವು ಜನ್ನಾಪುರ ಸರ್ಕಲ್ ನಲ್ಲಿ ನಿಂತಿದ್ದ ಸ್ಥಳೀಯರನ್ನು ಪಂಚರಾಗಿ ಬರಲು ಕೇಳಿದ್ದು, ಸದರಿರವರು ನಿರಾಕರಿಸಿರುತ್ತಾರೆ. ಈ ಕಾರಣ ಸಿಬ್ಬಂದಿಗಳಾದ ನಮ್ಮನ್ನೇ ಪಂಚರಾಗಿ ಪರಿಗಣಿಸಿ ಜನ್ನಾಪುರ-ಸಕಲೇಶಪುರ ರಸ್ತೆಯಲ್ಲಿ ಮಾಹಿತಿ ಇದ್ದ ವಾಹನಕ್ಕಾಗಿ ಕಾಯುತಿದ್ದಾಗ ಸ.7.15 ರ ಸಮಯಕ್ಕೆ ಮಾಹಿತಿ ಇದ್ದ ಬೈಕ್ ಜನ್ನಾಪುರದ ಕಡೆಯಿಂದ ಬಂದಿದ್ದು ನಾವು ವಾಹನ ನಿಲ್ಲಿಸಲು ಸೂಚನೆ ನೀಡಿದರು ಸಹಾ ವಾಹನ ನಿಲ್ಲಿಸದೇ ಇದ್ದಾಗ ನಾವು ಬೆನ್ನಟ್ಟಿ ಬೆಟ್ಟದಮನೆ ಗ್ರಾಮದ ಬಸ್ ಸ್ಟಾಫ್ ಬಳಿ ಸದರಿ ವಾಹನವನ್ನು ನಿಲ್ಲಿಸಿ ನೋಡಿದಾಗ ಆರೋಪಿಯು ಸದರಿ ಬೈಕ್ ನ ಚಾಲಕನಾಗಿದ್ದು ಆತನ ಹೆಸರು ಮತ್ತು ವಿಳಾಸ ತಿಳಿದುಕೊಂಡು ಸ್ಥಳದಲ್ಲಿ ಶೋಧನಾ ಸಮುಚ್ಚಿತ್ತ ಆಧಾರ ತಯಾರಿಸಿಕೊಂಡು ಆರೋಪಿಯ ಬೈಕ್ ನ ಪೆಟ್ರೋಲ್ ಟ್ಯಾಂಕ್ ನ ಮೇಲೆ ಇದ್ದ ಕಂದು ಬಣ್ಣದ ಪ್ಲಾಸ್ಟಿಕ್ ಚೀಲವನ್ನು ಪರಿಶೀಲಿಸಿದಾಗ ಅದರಲ್ಲಿ ಎರಡು ರಟ್ಟಿನ ಬಾಕ್ಸ್ ಗಳು ಇದ್ದು ಒಂದು ಬಾಕ್ಸ್ ನೊಳಗೆ ತಲಾ 90 ಎಂ.ಎಲ್. ನಷ್ಟು ಮದ್ಯ ತುಂಬಿದ Capten martin whisky ಯ 96 ಟೆಟ್ರಪ್ಯಾಕ್ ಗಳು ಹಾಗೂ ಮತ್ತೊಂದು ಬಾಕ್ಸ್ ನಲ್ಲಿ DK whisky ಯ 96 ಟೆಟ್ರಪ್ಯಾಕ್ ಗಳು ಇದ್ದವು. ಅವುಗಳ ಬಗ್ಗೆ ಆರೋಪಿಯನ್ನು ವಿಚಾರಿಸಿದಾಗ ಮಾರಾಟ ಮಾಡುವ ಉದ್ದೇಶದಿಂದ ಅವುಗಳನ್ನು ತೆಗೆದುಕೊಂಡು ಹೋಗುತ್ತಿರುವುದಾಗಿ ಹಾಗೂ ತನ್ನ ಬಳಿ ಯಾವುದೇ ಪರವಾನಗೆ ಇಲ್ಲ ಎಂದು ತಿಳಿಸಿರುತ್ತಾರೆ.

ಆರೋಪಿಯ ವಶದಲ್ಲಿ ಸಿಕ್ಕ ಮದ್ಯದ ಟೆಟ್ರಪ್ಯಾಕ್ ಗಳ ಪೈಕಿ ತಲಾ 26 ಟೆಟ್ರಪ್ಯಾಕ್ಗಳನ್ನು ಮಾದರಿಗೆಂದು ತೆಗೆದು ಅವುಗಳನ್ನು ನಿಯಮಾನುಸಾರ ಸೀಲು ಮಾಡಿ ವಶಕ್ಕೆ ಪಡೆದಿರುತ್ತೇವೆ. ಸದರಿ ಸ್ಥಳದಲ್ಲಿ ರಾ.7.30 ರಿಂದ 8.30 ರವರೆಗೂ ಮಹಜರ್ ಬರೆದು ಫೋಟೋ ತೆಗೆಸಲಾಯಿತು. ಆರೋಪಿಗೆ ನೋಟೀಸು ಜಾರಿ ಮಾಡಿ ವಶಕ್ಕೆ ಪಡೆದ ಮಾಲುಗಳೊಂದಿಗೆ ಕಚೇರಿಗೆ ಹಾಜರಾದೆವು. ನಂತರ ತನಿಖಾಧಿಕಾರಿಗಳ ಮುಂದೆ ಹೇಳಿಕೆ ನೀಡಿದ್ದೇನೆ.

ಸಾಕ್ಷಿಯು ದಿ.18.03.2024 ರ ಮಹಜರ್, ಮಾದರಿ ಸೀಲಿನ ನಕಲಿನ ಮೇಲೆ ತಮ್ಮ ಸಹಿಗಳನ್ನು ಗುರುತಿಸಿ, ಎರಡು ಫೊಟೋಗಳನ್ನು ನೋಡಿ ಅವುಗಳನ್ನು ಮಹಜರ್ ಕಾಲಕ್ಕೆ ತೆಗೆದ ಬಗ್ಗೆ ಗುರುತಿಸುತ್ತಾರೆ. ಮಹಜರ್ ನ್ನು ನಿಪಿ-1, ಮಾದರಿ ಸೀಲಿನ ನಕಲನ್ನು ನಿಪಿ-2, ಸಾಕ್ಷಿಯ ಸಹಿಗಳನ್ನು

ನಿಪಿ-1(ಎ) ಮತ್ತು 2(ಎ), ಫೋಟೋಗಳನ್ನು ಸಿಡಿ ಮತ್ತು ಪ್ರಮಾಣಪತ್ರದೊಂದಿಗೆ ನಿಪಿ-3 ರಿಂದ 6 ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಬ್ಯಾಗ್‌ಗಳು ಹಾಗೂ ಅದರೊಳಗಿರುವ ಟೆಟ್ರಪ್ಯಾಕ್ ಗಳನ್ನು ಮಾದರಿ ತೆಗೆದ ಬಗ್ಗೆ ಗುರುತಿಸುತ್ತಾರೆ. ಅವುಗಳನ್ನು ಕ್ರಮವಾಗಿ ಎಂ.ಒ.1 ರಿಂದ 4, ಸಾಕ್ಷಿಯ ಸಹಿಯನ್ನು ಎಂ.ಒ.1(ಎ) ಮತ್ತು 3(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಹೆಚ್.ಜಿ.ಎ. ವಕೀಲರಿಂದಃ**

ದಿ.18.03.2024 ರಂದು ಬೆ.10.00 ಗಂಟೆಗೆ ನಾನು ಕಚೇರಿಗೆ ಹೋಗಿದ್ದೆ. ಆ ದಿನ ಜನ್ನಾಪುರ ಗ್ರಾಮದಲ್ಲಿ ಮಾತ್ರ ಗಸ್ತು ಕಾರ್ಯ ಮಾಡಿದ್ದೇವೆ. ಚಾಸಾ-9 ರವರಿಗೆ ಮಾಹಿತಿ ಬಂದಿತ್ತು. ಜನ್ನಾಪುರ-ಸಕಲೇಶಪುರ ರಸ್ತೆಯಲ್ಲಿ ಸುಮಾರು 15 ನಿಮಿಷಗಳ ಕಾಲ ವಾಹನಕ್ಕಾಗಿ ಕಾಯುತ್ತಿದ್ದೆವು. ಜನ್ನಾಪುರ-ಸಕಲೇಶಪುರ ರಸ್ತೆಯಲ್ಲಿ ಅನೇಕ ವಾಹನಗಳು ತಿರುಗಾಡುತ್ತಿರುತ್ತವೆ ಎಂದರೆ ಸರಿ. ಆ ದಿನ ಬೇರೆ ಯಾವುದೇ ವಾಹನಗಳನ್ನು ನಾವು ತಪಾಸಣೆ ಮಾಡಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ವಾಹನ ಸಂಖ್ಯೆಯನ್ನು ದಾಖಲೆಯ ಆಧಾರದ ಮೇಲೆ ಹೇಳಿದ್ದೇನೆ ಎಂದರೆ ಸರಿಯಲ್ಲ. ಪ್ಲಾಸ್ಟಿಕ್ ಚೀಲ ಮತ್ತು ರಟ್ಟಿನ ಬಾಕ್ಸ್ ಗಳು ಈ ದಿನ ನ್ಯಾಯಾಲಯದ ಮುಂದೆ ಇಲ್ಲ ಎಂದರೆ ಸರಿ. ಡಿಜಿಟಲ್ ಕ್ಯಾಮೆರಾಗಳಲ್ಲಿ ಫೋಟೋ ತೆಗೆದರೆ ಫೋಟೋದಲ್ಲಿ ದಿನಾಂಕ ಮತ್ತು ಸಮಯ ಬರುತ್ತದೆ ಎಂದರೆ ಸಾಕ್ಷಿಯು ಆ ರೀತಿ ಸೆಟ್ಟಿಂಗ್ಸ್ ಇದ್ದರೆ ಬರುತ್ತದೆ ಎಂದು ನುಡಿಯುತ್ತಾರೆ. ನಿಪಿ-1 ನ್ನು ಚಾಸಾ-1 ರವರು ಬರೆದಿದ್ದಾರೆ. ಮಹಜರ್ ನ ಒಕ್ಕಣೆಯನ್ನು ನಾನು ಹೇಳಿಲ್ಲ.

ನಿಪಿ-1 ರಲ್ಲಿ ಏನು ಬರೆದಿದೆ ಎಂದು ನಾನು ಓದಿ ತಿಳಿದಿದ್ದೇನೆ. ಮಹಜರ್ ನ್ನು ಬೀದಿ ದೀಪದ ಸಾಹಯದಿಂದ ಬರೆಯಲಾಗಿದೆ ಎಂದು ನಿಪಿ-1 ರಲ್ಲಿ ನಮೂದಿಸಿಲ್ಲ. ಸದರಿ ವಿಷಯ ನಿಪಿ-1 ರಲ್ಲಿ ಬರೆದಿರುವುದು ಕಾಣುತ್ತಿದೆ ಎಂದರೆ ಸರಿ. ಮಹಜರ್ ಬರೆದ ಸ್ಥಳದ ಪೂರ್ವಕ್ಕೆ ರಸ್ತೆ, ಪಶ್ಚಿಮಕ್ಕೆ ಬೆಟ್ಟದಮನೆ ಗ್ರಾಮದ ಬಸ್ ಸ್ಟಾಪ್ ಮತ್ತು ವಾಟರ್ ಟ್ಯಾಂಕ್ ಇತ್ತು. ನಿಪಿ-3 ಮತ್ತು 4 ರಲ್ಲಿ ರಸ್ತೆ ಮತ್ತು ಬಸ್ ಸ್ಟಾಪ್ ಕಾಣುತ್ತಿಲ್ಲ ಎಂದರೆ ಸರಿ. ವಶಕ್ಕೆ ಪಡೆಯಲಾಯಿತು ಎಂದು ಹೇಳಲಾದ ಟೆಟ್ರಪ್ಯಾಕ್ ಗಳ ಸೀರಿಯಲ್ ನಂಬರ್ ಗಳನ್ನು ಈಗ ಹೇಳಲು ಆಗುವುದಿಲ್ಲ. ನಾನು ಹೇಳಿದಂತೆ ಯಾವುದೇ ದಾಳಿ ಮಾಡಿ ಆರೋಪಿಯಿಂದ ಯಾವುದೇ ವಸ್ತುಗಳನ್ನು ವಶಕ್ಕೆ ಪಡೆಯದೇ ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಎಂ.ಒ.2 ಮತ್ತು 3 ರಂತಹ ಟೆಟ್ರಪ್ಯಾಕ್ ಗಳು ಮದ್ಯದ ಅಂಗಡಿಗಳಲ್ಲಿ ಸಿಗುತ್ತವೆ ಎಂದರೆ ಇರಬಹುದು. ಆರೋಪಿಗೂ, ಈ ಪ್ರಕರಣಕ್ಕೂ, ಮುದ್ದೆಮಾಲುಗಳಿಗೂ ಒಂದಕ್ಕೊಂದು ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಇಲ್ಲ</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.